
ನವಸಾಕ್ಷರ ಪುಸ್ತಕ ಮಾಲೆ ೩೪

ಗಾದೆಗಳು

ವಿಶ್ವನಾಥ ಬದಿಕಾನ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೩೪

ಗಾದೆಗಳು

ವಿಶ್ವನಾಥ ಬದಿಕಾನ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೬

GADEGALU : By Viswanatha Badikana. Published by The Director of Prasaranga, Kannada University, Hampi – 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಎಚ್.ಎಸ್.ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ: ರೂ ೮.೦೦

ಮುದ್ರಕರು
ಅಭಿಮಾನಿ ಪ್ರಕಾಶನ
೯೬, ಡಾ.ರಾಜಕುಮಾರ್ ರಸ್ತೆ,
ರಾಜಾಜಿನಗರ,
ಬೆಂಗಳೂರು—೫೬೦ ೦೨೧

ಗಾದೆಗಳು

ಗಾದೆ ಎಂದರೇನು?

ಜೀವನದ ಅನುಭವವನ್ನು ಚುಟುಕಾಗಿ ಹೇಳುವ ಮಾತು ಗಾದೆ. ಅದು ಹಲವರ ಅನುಭವದ ಒಟ್ಟಿನ ವಿವೇಕ. ಹತ್ತು ನಾಲಗೆಯ ಚಲಾವಣೆಯ ನಾಣ್ಯ. ಬಾಯಲ್ಲಿ ಮಾತಾಗಿ ಗಾಳಿಯಲ್ಲಿ ಹಾರಿಹೋಗುವುದೇ ಗಾದೆ. ಎಂದರೆ ಗಾದೆಯನ್ನು ಓದುವುದಲ್ಲ; ಹೇಳುವುದು. ಹಾಗಾಗಿ ಗಾದೆ ಒಂದು ಕ್ಷಣದ ಪ್ರತಿಕ್ರಿಯೆ.

ಒಂದು ಒಳ್ಳೆಯ ಪದ ಗಾದೆಯಾಗಬಹುದು. ಹೋಲಿಕೆಯುಳ್ಳ, ನೀತಿಪರವಾದ ಮಾತುಗಳೂ ಗಾದೆ. ಗಾದೆಯಲ್ಲಿ ಮಾತಿನ ಸಾರ ರೂಪವಿದೆ. ಬದುಕಿನ ಸಂಕೇತಗಳ ಜೀವಂತ ಶಕ್ತಿಯಿದೆ.

ಗಾದೆ ಮೂಡಿದ್ದು ಹೇಗೆ?ಭೂಮಿಯಿಂದ ಎದ್ದವೇ? ಆಕಾಶದಿಂದ ಬಿದ್ದವೇ ? ಗಾಳಿಯಲ್ಲಿ ಹರಡಿದವೇ?ನೀರಿನಲ್ಲಿ ಹರಿದವೇ ? ಇಲ್ಲ. ಗಾದೆ ಒಂದು ಜನಾಂಗದ ಜನರ ತಿಳಿವು. ಹಲವರ ಮನಸ್ಸಿನ ಸಾರ. ವಿವಿಧ ಭಾವದ ರೂಪಕ. ಸಮಕಾಲೀನ ಅನುಭವಗಳ ಆಗು ಹೋಗುಗಳೇ ಗಾದೆ. ಪರಿಮಿತ ಅವಧಿಯ, ಪರಿಮಿತ ಪರಿಸರದ ರಚನೆಗಳೇ ಗಾದೆ.

ಗಾದೆಯನ್ನು ಗಾಹೆ, ಸುಭಾಷಿತ, ಸಾಮತಿ ಮುಂತಾಗಿ ಕರೆಯುತ್ತಾರೆ. ಗತಿ ಬದ್ಧ ನುಡಿ, ಹಾಡು, ಉಪಮೆಗಳು ಗಾದೆ ಆಗುತ್ತದೆ. ಗಾದೆ ಮನೋಹರವಾದ ಮಾತು. ಅದು ಬೀದಿಯಲ್ಲಿ ಕೇಳಿದ, ಜನರೆದುರು ಆಡಿದ, ಮಾತು. ಗಾದೆ ಹಳೆಯ ಮಾತು. ಜನರಾಡಿ ಪಳಗಿಸಿದ ಮಾತು. ಎಂದರೆ ಒಬ್ಬನಾಡಿದ ಮಾತಾದರೂ ಹಲವರು ಪಳಗಿಸಿದ ಮಾತು. ಗಾದೆಯನ್ನು ಮೊದಲು ಯಾರು ನುಡಿದುದೆಂದು ಹೇಳುವುದು ಕಷ್ಟ. ಅದು ಅಜ್ಜನ ಮಾತು. ಅಜ್ಜ ಹೇಳುವ ಮಾತು ನಿಜವಿರುತ್ತದೆ. ಹಾಗಾಗಿ ಗಾದೆ ಬೀದಿಯ ಜನರ ವಿವೇಕದ ಮಾತು.

ಜನವಿದ್ದಂತೆ ಗಾದೆ ಇರುತ್ತದೆ. ವಿವೇಕಿಗಳು ಗಾದೆಯನ್ನು ರೂಪಿಸುತ್ತಾರೆ. ಜನರು ಅದನ್ನು ಉಚ್ಚರಿಸುತ್ತಾರೆ. ಕೆಲವರೆಂದ ಮಾತು ನಿಜವಿದ್ದಮೇಲೆ ಎಲ್ಲರ ಮಾತು ನಿಜವಿರಬೇಕಲ್ಲ. ಅದು ಜನವಾಣಿ, ಸಿದ್ಧಿಸಿದ ನುಡಿ.

ಗಾದೆಗಳು ಚಿಟ್ಟೆಗಳಿದ್ದ ಹಾಗೆ. ಕೆಲವು ಸಿಕ್ಕಿಕೊಳ್ಳುತ್ತವೆ. ಉಳಿದವು ಹಾರಿಹೋಗುತ್ತವೆ. ಒಳ್ಳೆಯ ಗಾದೆ ಹುಬ್ಬಿನ ನಡುವೆ ಹೊಡೆಯುವುದಿಲ್ಲ. ಕಣ್ಣಿಗೆ ಗುರಿಯಿಡುತ್ತವೆ. ಗಾದೆಯನ್ನೂ, ಮೂರ್ಖನನ್ನೂ, ಸತ್ಯವನ್ನೂ ಎದುರಿಸಲಾಗದು. ಗಾದೆಯನ್ನು ತಿಳಿದವನಿಗೆ ಸೊಗಸಾಗಿ ಮಾತನಾಡಲು ಸುಲಭ. ಮಾತನ್ನು ಉಣ್ಣಲು ಗಾದೆ ಎಲೆ. ಗಾದೆ ತಿಳಿದವ ಜಗಳ ಬಿಡಿಸುತ್ತಾನೆ. ಮಾತು ಬಲ್ಲವನಿಗೆ ಜಗಳವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ.

ಜನರಿಗಾಗಿ ಜನರೇ ಸೃಷ್ಟಿಸಿಕೊಂಡ ಸಾಹಿತ್ಯ ಗಾದೆ. ಒಂದು ಜನಾಂಗದ ಸಂಸ್ಕೃತಿ, ಅವರ ಮನಸ್ಸಿನ ಶೀಲ, ಅವರನ್ನಾಳುವ ಆದರ್ಶ ಗಾದೆಯಲ್ಲಿದೆ. 'ಶರಣರ ಗುಣ ಮರಣದಲ್ಲಿ ನೋಡು, ತ್ಯಾಗಿಯಗುಣ ಭೋಗದಲ್ಲಿ ನೋಡು' ಎಂಬ ಗಾದೆಯಿದೆ. ಅಂತೆಯೇ ಜನತೆಯ ಗುಣ ಗಾದೆಯಲ್ಲಿ ನೋಡು – ಎನ್ನಬಹುದು.

ಚಿಕ್ಕದಾದ ಮಾತೆಲ್ಲವೂ ಗಾದೆಯಾಗಲಾರದು . ಆ ಮಾತು ಜೀವನದ ಒಂದು ಮುಖವನ್ನು ಬಿಂಬಿಸಬೇಕು. ಒಂದು ವಿಚಾರದ, ಸಮಸ್ಯೆಯ, ಸಂಗತಿಯ ಕೇಂದ್ರವಾಗಿರಬೇಕು. ಕೇಳಿದೊಡನೆ ಇದು ಸರಿಯಾದ ಮಾತು ಎನ್ನುವಂತಿರಬೇಕು.

ಗಾದೆಯು ವಿಚಾರಗಳ ಸಾರಸಂಗ್ರಹ ರೂಪ. ವಿಚಾರ ಪೂರಿತವಾದ ಸಂಗ್ರಹಕ್ಕೆ ಮೊನೆ, ಖಾರ, ಇಲ್ಲದಿದ್ದರೆ ರುಚಿ ಇಲ್ಲ. ಚೇಳನ್ನು ರಕ್ಷಿಸುವ ಕೊಂಡಿಯಂತೆ, ಉಪ್ಪಿನ ಕಾಯನ್ನು ಉಪ್ಪು ಖಾರಗಳು ರಕ್ಷಿಸುವಂತೆ, ಬಾಣಕ್ಕೆ ಮೊನೆ ಗರಿಗಳಿದ್ದ ಹಾಗೆ, ಸಂಗ್ರಹವೂ ಗಾದೆ ಮಾತಿನ ಒಳ ವಿಚಾರದ ಕೊಂಡಿ ಇದ್ದಂತೆ. ಗಾದೆಗಳಲ್ಲಿ ತತ್ವವಿದೆ. ಅವುಗಳು ವಿಚಾರ ವಿನಿಮಯ ಮಾಡುತ್ತವೆ. ಚರ್ಚೆಗೆ ಚಾಲನೆ ಕೊಡುತ್ತವೆ, ಶಕ್ತಿಕೊಡುತ್ತವೆ. ಗಾದೆಗಳು ಜೇನು ನೊಣವಿದ್ದಂತೆ. ಅವುಗಳ ಮೈ ಕಿರಿದು. ತುಪ್ಪದ ಸಿಹಿ ಹೆಚ್ಚು.

ಗಾದೆಯನ್ನು ಕುರಿತು ಗಾದೆಗಳು

ಗಾದೆಯ ಮಹತ್ವವನ್ನು ಹೇಳುವ ನೂರಾರು ಗಾದೆಗಳಿವೆ. ಅವೆಲ್ಲವೂ ಗಾದೆಯ ಗುಣಗಳನ್ನು ಹೇಳುತ್ತವೆ. ಗಾದೆಯು ಪ್ರಯೋಗದ ಔಚಿತ್ಯವನ್ನು ಚರ್ಚಿಸುತ್ತವೆ. ಗಾದೆಯು ಪುರಾಣ ವೇದಗಳಿಗೆ ಸಮಾನ. ಗಾದೆ ಸತ್ಯವನ್ನು ಹೇಳುತ್ತದೆ. ಹಾಗಾಗಿಯೇ 'ಗಾದೆ ವೇದಕ್ಕೆ ಸಮಾನ' ಎನ್ನುವುದು

ಕೆಲವು ಗಾದೆಗಳನ್ನು ಗಮನಿಸಬಹುದು.

೧. ಗಾದೆ ಮಾತು ಸಾವಿರಕ್ಕೊಂದು

೨. ವೇದ ಸುಳ್ಳಾದರೂ ಗಾದೆ ಸುಳ್ಳಾಗದು

೩. ಗಾದೆಗಳು ಚಿಟ್ಟೆಗಳಿದ್ದ ಹಾಗೆ

೪. ಸಾವಿಗೂ ಗಾದೆಗೂ ಸಂಕ್ಷಿಪ್ತತೆಯ ಆಸೆ

೫. ಗಾದೆಯು ಸಿದ್ಧಿಸಿದ ನುಡಿ

೬. ಪೂರ್ವಿಕರ ನುಡಿ ಪುರಾಣ

ಪೂರ್ವಿಕರ ನುಡಿ ಗಾದೆ

೭. ವೇದ ಗಾದೆಯ ಮಾತು

ಶಾಸ್ತ್ರ ಸಂತೆಯ ಗುಲ್ಲು

ಪುರಾಣ ಪುಂಡರ ಪೋಟಿ

೮. ವೇದ ಓದದವನು ಋಷಿಯಲ್ಲ

ಗಾದೆ ಓದದವನು ಮನುಷ್ಯನಲ್ಲ

೯. ಊಟಕ್ಕೆ ಮೊದಲು ಉಪ್ಪಿನಕಾಯಿ

ಮಾತಿಗೆ ಮೊದಲು ಗಾದೆ

೧೦. ರೂಢಿಯ ಮಾತೇ ಗಾದೆ

ನಾಡಿನ ನಡತೆಯೇ ನಿಯಮ

೧೧. ಕಾಗೆ ಇಲ್ಲದ ಊರಿಲ್ಲ

ಗಾದೆ ಇಲ್ಲದ ಭಾಷೆಯಿಲ್ಲ

೧೨. ಆಡು ಮುಟ್ಟದ ಸೊಪ್ಪಿಲ್ಲ

ಗಾದೆ ಇಲ್ಲದ ಭಾಷೆ ಇಲ್ಲ

೧೩. ಗಾದೆ ಹೇಳೋನು

ಗೂದಿ ಹರಿದು ಸತ್ತ

೧೪. ಗಾದಿ ಏರುವವನು

ಗಾದೆ ಅರಿತಿರಬೇಕು

೧೫. ಪ್ರಸ್ತಾಪಕ್ಕೆ ಒದಗದ ಗಾದೆ

ಪ್ರಸ್ತಕ್ಕೆ ಒದಗದ ಕಜ್ಜಾಯ

೧೬. ಗಾದೆಯ ಮರ್ಮವರಿತವನು

ವೇದದ ಮರ್ಮವರಿತಾನು

೧೭. ಸತ್ಯವನ್ನೂ, ಮುರ್ಖನನ್ನೂ, ಗಾದೆಯನ್ನು ಎದುರಿಸಿದವರಿಲ್ಲ

ಎಲ್ಲಾ ಗಾದೆಗಳ ಹಿಂದೆ ಒಂದೊಂದು ಕಥೆ ಇರುತ್ತದೆ


ಗಾದೆಯ ಹಿಂದೆ ಕಥೆ ಯಾಕೆ ಇರುತ್ತದೆ

ಸಾಮಾನ್ಯವಾಗಿ ಕಥೆ ನೀತಿಯನ್ನು ಹೇಳುತ್ತದೆ. ಗಾದೆಯ ಹಿಂದಿನ ಕಥೆ ಗಾದೆ ಹೇಳುವ ಸಂದರ್ಭಕ್ಕೆ ಪೂರಕವಾಗಿರುತ್ತದೆ. ಬಯಸಿದ ವಸ್ತು ಸಿಗದಿದ್ದಾಗ ನಿರಾಶೆ ಆಗುತ್ತದೆ. ನಿರಾಶೆ ಆಗಬಾರದೆನ್ನುವುದು ಇಲ್ಲಿಯ ನೀತಿ. ಒಬ್ಬ ವ್ಯಕ್ತಿ ತಾನೇ ಶ್ರೇಷ್ಠನೆಂದು ಅಹಂಕಾರ ಪಡುತ್ತಾನೆ. ಅದರಿಂದ ಆತನೇ ನಾಶ ಆಗುತ್ತಾನೆ. ಇನ್ನೊಬ್ಬ ಪರರ ಸಂಪತ್ತಿಗೆ ಹೊಂಚು ಹಾಕುತ್ತಾನೆ. ಇದರಿಂದಾಗಿ ಇದ್ದ ಸಂಪತ್ತನ್ನೂ ಕಳೆಯುತ್ತಾನೆ. ಈ ರೀತಿಯಲ್ಲಿ ಗಾದೆಯ ಹಿಂದೆ ಕಥೆ ಬರುತ್ತದೆ. ಅವುಗಳಲ್ಲಿ ಕೆಲವನ್ನು ನೋಡೋಣ.

ಕಥೆ ೧

ಗಾದೆ : ಅತಿಯಾಸೆ ಗತಿಕೆಡಿಸಿತು

ಇದೊಂದು ನಾಯಿಯ ಕಥೆ. ಎಲ್ಲವೂ ತನ್ನದಾಗಬೇಕೆಂದು ಆಸೆಪಡುವುದು. ಅದನ್ನು ಪಡೆಯುವುದಕ್ಕಾಗಿ ಇರುವುದನ್ನು ಬಿಡುವುದು. ಅದಕ್ಕಾಗಿಯೇ 'ಆಸೆಯೇ ದುಃಖಕ್ಕೆ ಕಾರಣ ' 'ಆಸೆ ಪಡುವುದು ಒಳ್ಳೆಯದಲ್ಲ. ' 'ಆಸೆಯನ್ನು ಬಿಡಬೇಕು' ಎನ್ನುತ್ತಾರೆ.



ಅತಿ ಆಸೆ ಗತಿಕೇಡು

ನಾಯಿಯ ಕಥೆ ಹೀಗಿದೆ :

ಒಂದು ನಾಯಿ ಇತ್ತು. ಒಮ್ಮೆ ಅದಕ್ಕೊಂದು ಮೂಳೆ ಸಿಕ್ಕಿತು. ಅದನ್ನು ಕಚ್ಚಿಕೊಂಡು ದೂರ ಹೋಯಿತು. ಹೋಗುತ್ತಾ ಒಂದು ತೊರೆ ಸಿಕ್ಕಿತು. ತೊರೆಯ ದಡದಲ್ಲಿ ಇಣುಕಿ ನೋಡಿತು. ನೀರಿನ ಒಳಗಡೆ ನಾಯಿಯ ಪ್ರತಿಬಿಂಬವಿತ್ತು. ನಾಯಿಗೆ ನೀರೊಳಗಡೆ ಬೇರೊಂದು ನಾಯಿ ಇದ್ದಂತೆ ತೋರಿತು. ಬೌ ಬೌ ಎಂದು ಬೊಗಳಿತು. ಬಾಯಲಿದ್ದ ಮೂಳೆ ನೀರಿಗೆ ಬಿತ್ತು. ನಾಯಿಯ ಆಸೆ ನಿರಾಶೆಯಾಯಿತು. ಪೆಚ್ಚು ಮೋರೆಯಲ್ಲಿ ಮನೆಗೆ ಹೋಯಿತು.

ಇದೇ ರೀತಿಯ ಇನ್ನೊಂದು ಕಥೆಯಿದೆ. ಇದು ಕಾಗೆ ನರಿಯ ಕಥೆ. ಒಂದು ಕಾಗೆ ನರಿಯಿಂದ ಮೋಸ ಹೋದ ಕಥೆ. ಹೊಗಳಿಕೆಗೆ ಪಾತ್ರರಾಗುವುದು ಅಪಾಯ. ನರಿ ಕಾಗೆಯನ್ನು ಹೊಗಳುತ್ತದೆ. ಹೊಗಳಿ ಮೋಸ ಮಾಡುತ್ತದೆ.

ಒಂದು ಕಾಗೆ ಇತ್ತು. ಅದು ಮರದ ಮೇಲೆ ಕುಳಿತು ಮಾಂಸದ ತುಂಡೊಂದನ್ನು ತಿನ್ನುತ್ತಿತ್ತು. ಆ ಮರದ ಬುಡದಲ್ಲಿ ಒಂದು ನರಿ ಇತ್ತು. ನರಿಯು ಕಾಗೆ ತಿನ್ನುವ ಮಾಂಸವನ್ನು ಪಡೆಯಲು ಉಪಾಯ ಹುಡುಕಿತು.

ಕಾಗಕ್ಕಾ ! ಕಾಗಕ್ಕಾ!

ನೀನು ಎಷ್ಟು ಅಂದ

ನಿನ್ನ ಮೈ ಬಣ್ಣ ಎಷ್ಟು ಚಂದ

ನಿನ್ನ ಹಾಡು ಎಷ್ಟು ಇಂಪು

-ಎಂದು ಹೊಗಳಿತು.

ನರಿಯ ಹೊಗಳಿಕೆಗೆ ಕಾಗೆ ಉಬ್ಬಿತು. ಕಾಗೆಗೆ ನರಿಯ ಮೋಸ ತಿಳಿಯಲಿಲ್ಲ. ಕಾ ! ಕಾ ! ಎಂದು ಕೂಗಿ ಹಾರಿದಾಗ, ಕಾಗೆಯ ಬಾಯಲಿದ್ದ ಮಾಂಸ ನರಿಗೆ ಸಿಕ್ಕಿತು. ಕಾಗೆ ನಿರಾಶೆಯಿಂದ ಹಾರಿಹೋಯಿತು.

ಕಥೆ ೨

ಗಾದೆ : ನರಿ ದ್ರಾಕ್ಷಿಹಣ್ಣು ಹುಳಿ ಅಂದ ಹಾಗೆ

ಸಿಕ್ಕದ ದ್ರಾಕ್ಷಿ ಎಲ್ಲ ಹುಳಿ

೩

ನರಿ ಮೋಸಗಾರ ಮತ್ತು ಬುದ್ಧಿವಂತ. ಅದು ತನ್ನ ಎದುರಾಳಿಯನ್ನು ಉಪಾಯದಿಂದ ಗೆಲ್ಲುತ್ತದೆ. ಎಲ್ಲರಿಗೂ ಬಯಸಿದ ವಸ್ತು ಸಿಗದಿದ್ದಾಗ ನಿರಾಶೆಯಾಗುತ್ತದೆ. ಆದರೆ ನರಿಗೆ ನಿರಾಶೆಯೇ ಇಲ್ಲ. ತನಗೆ ಸಿಗದ ವಸ್ತು 'ಕೆಟ್ಟದ್ದು' ಎಂದು ಊರೆಲ್ಲಾ ಡಂಗುರ ಸಾರುತ್ತದೆ. ಈ ಅರ್ಥದ ಕಥೆಯೊಂದು ಇಲ್ಲಿದೆ. ಒಂದು ನರಿ ಇತ್ತು. ಅದಕ್ಕೆ ದ್ರಾಕ್ಷಿ ತಿನ್ನುವ ಆಸೆಯಾಯಿತು. ಆದರೆ ಎಲ್ಲೂ ದ್ರಾಕ್ಷಿ ಸಿಗಲಿಲ್ಲ. ನರಿ ಊರು ಬಿಟ್ಟು ಬೇರೆ ಊರಿಗೆ ಹೋಯಿತು. ಅಲ್ಲಿ ದ್ರಾಕ್ಷಿ ತೋಟವೊಂದಕ್ಕೆ ನುಗ್ಗಿತು. ಹಸಿದ ನರಿಗೆ ದ್ರಾಕ್ಷಿ ಕಂಡು ಜೋರು ಹಸಿವಾಯಿತು. ದ್ರಾಕ್ಷಿ ಕಿತ್ತು ತಿನ್ನುವುದಕ್ಕೆ ಕಷ್ಟವಾಯಿತು. ದ್ರಾಕ್ಷಿಗೊಂಚಲು ಎತ್ತರದಲ್ಲಿತ್ತು. ಸುಮಾರು ಬಾರಿ ಮೇಲಕ್ಕೆ ಹಾರಿತು. ಕೊನೆಗೂ ನರಿಗೆ ದ್ರಾಕ್ಷಿ ಎಟುಕಲಿಲ್ಲ. ನರಿ ಸೋತಿತು.

ನರಿ ಅಂದಿತು,

" ಆ ದ್ರಾಕ್ಷಿ ಹುಳಿ

ಅದು ಸಿಕ್ಕರೂ ನನಗೆ ಬೇಡ "

ಎಂದು ಊಳಿಡುತ್ತಾ ಕಾಡಿಗೆ ಹೋಯಿತು.



ನರಿಗೆ ದೊರಕದ ದ್ರಾಕ್ಷಿ

ಕಥೆ ೩

ಗಾದೆ : ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ಈ ಕಥೆ ಬಲಶಾಲಿಯೊಬ್ಬ ಸಾಮಾನ್ಯನೊಬ್ಬನಿಂದ ಸೋಲುವುದನ್ನು ಸೂಚಿಸುತ್ತದೆ. ಅಂದರೆ ಯುಕ್ತಿಯಿಂದ ಶಕ್ತಿಯನ್ನು ಗೆಲ್ಲಬಹುದು. ಅಪಾಯ ಬಂದಾಗ ಉಪಾಯದಿಂದ ಪಾರಾಗಬೇಕು. ಇಲ್ಲಿ ಬಲಶಾಲಿ ಸಿಂಹವನ್ನು ಮೊಲ ಸಾಯಿಸುತ್ತದೆ. ಅಪಾಯದಿಂದ ಪಾರಾಗುತ್ತದೆ.

ಒಂದು ಕಾಡಿನಲ್ಲಿ ಒಂದು ಸಿಂಹವಿತ್ತು. ಅದು ಎಲ್ಲಾ ಪ್ರಾಣಿಗಳನ್ನೂ ತಿನ್ನುತ್ತಿತ್ತು. ಹೀಗೇ ತಿಂದರೆ ನಮ್ಮೆಲ್ಲರ ಸಂತತಿ ನಾಶವಾಗುತ್ತದೆ. ಇದಕ್ಕೊಂದು ನಿಯಮ ಮಾಡಬೇಕು ಎಂದು ಯೋಚಿಸಿ ಪ್ರಾಣಿಗಳೆಲ್ಲವೂ ಸಭೆ ಸೇರಿದವು. ಒಂದು ಒಪ್ಪಂದಕ್ಕೆ ಬಂದವು. ದಿನಕ್ಕೆ ಒಂದು ಪ್ರಾಣಿಯಂತೆ ನಾವು ಕೊಡೋಣ. ಇದಕ್ಕೆ ಒಪ್ಪದಿದ್ದರೆ ಕಾಡು ಬಿಟ್ಟು ದೂರ ಹೋಗೋಣ. ಪ್ರಾಣಿಗಳ ಒಪ್ಪಂದಕ್ಕೆ ಸಿಂಹ ಒಪ್ಪಿತು.

ಒಂದು ದಿನ ಮೊಲದ ಸರತಿ ಬಂತು. ಆ ದಿನ ಮೊಲವು ತಡವಾಗಿ ಹೋಯಿತು. ಸಿಂಹವು ಹಸಿದಿತ್ತು. ಮೊಲವನ್ನು ಕಂಡು ಸಿಂಹದ ಕೋಪ ಹೆಚ್ಚಾಯಿತು.

"ಎಲೈ ಮೊಲವೇ ! ಯಾಕೆ ತಡವಾಯಿತು ಏನು ತಡೆಯಾಯಿತು " ? ಎಂದು ಮೊಲವು ಹೇಳಿತು

"ಹೇ ಸಿಂಹವೇ, ನಾನು ನಿನಗಾಗಿ ಓಡೋಡಿ ಬರುತ್ತಿದ್ದೆ. ಆಗ ದಾರಿಯಲ್ಲಿ ಒಬ್ಬ ಸಿಕ್ಕಿದ. ಆತ ನಿನಗಿಂತಲೂ ಬಲಶಾಲಿಯಾಗಿದ್ದಾನೆ. ಆತನಿಗೆ ಈಗ ಬರುವೆನೆಂದು ಮಾತು ಕೊಟ್ಟು ಬಂದೆ. "

ಸಿಂಹವು ಗರ್ಜಿಸಿತು. ತನಗೆ ಸಮಾನರು ಈ ಕಾಡಲ್ಲಿ ಯಾರೂ ಇಲ್ಲ. ಅವನೆಲ್ಲಿ ? ಆತನನ್ನು ಈಗಲೇ ಮುಗಿಸುವೆ. ನೋಡೋಣವೆಂದು ಹೊರಟಿತು. ಮೊಲ ಮತ್ತು ಸಿಂಹ ತುಂಬಾ ದೂರ ಹೋದವು. ದಾರಿಯಲ್ಲಿ ಒಂದು ಬಾವಿ ಸಿಕ್ಕಿತು. ಮೊಲವು ಬಾವಿಯ ದಡದಲ್ಲಿ ನಿಂತಿತು. ಬಲಶಾಲಿ ಸಿಂಹವೇ, ನಿನ್ನ ಸಮಾನ ಅಲ್ಲಿರುವನೆಂದು ತೋರಿಸಿತು. ಸಿಂಹ ತನ್ನ ಬಿಂಬ ಕಂಡು ಬಾವಿಗೆ ಜಿಗಿಯಿತು. ಎದುರಾಳಿಯನ್ನು ಹುಡುಕಿತು. ನೀರು ಕುಡಿದು ಸತ್ತು ಹೋಯಿತು.

ಕಥೆ ೪

ಗಾದೆ : ಕೊಟ್ಟವ ಕೋಡಂಗಿ

ಇಸ್ಕೊಂಡವ ಈರಭದ್ರ



ಈ ಕಥೆ ಸಾಲಕೊಟ್ಟವನ ಮತ್ತು ಸಾಲ ಪಡಕೊಂಡವನ ಬಗೆಗಿನದು. ಸಾಲ ಪಡಕೊಂಡು ಸಂಬಂಧವನ್ನೇ ಕಳಕೊಳ್ಳುವವರು ಹೆಚ್ಚು. ಸಾಲಕೊಟ್ಟರೆ ಸಿಗುವುದು ಕಷ್ಟ. ಕೊಟ್ಟವನ ಅಗತ್ಯಕ್ಕೆ ಹಣ ಸಿಗುವುದಿಲ್ಲ. ಸಾಲ ಪಡೆದವನನ್ನು ಕೇಳಿದರೆ ನಾಳೆ - ನಾಡಿದ್ದು ಎನ್ನುತ್ತಾನೆ. ಸಾಲ ಕೊಟ್ಟವನು ಮಂಗ. ಪಡಕೊಂಡವನು ಈರಭದ್ರ.

ಎಲ್ಲಾ ಗಾದೆಗಳ ಹಿಂದೆ ಒಂದೊಂದು ಘಟನೆಗಳಿರುತ್ತವೆ.

ಕಥೆ ಕಲ್ಪನೆಯನ್ನು ಹೇಳುತ್ತದೆ. ಘಟನೆ ನಿಜಸಂಗತಿ ಆಗಿರುತ್ತದೆ. ಘಟನೆಯಲ್ಲೂ ನೀತಿ ಇರುತ್ತದೆ. ಎಲ್ಲೋ ಆದದ್ದು ಘಟನೆ. ಯಾರೋ ಹೇಳಿದ್ದು ಕಥೆ. ಘಟನೆಗೆ ಕಾರಣಗಳಿರುತ್ತವೆ. ಕಾರಣಗಳ ಹಿಂದೆ ಸತ್ಯ ಇರುತ್ತದೆ. ಈ ಸತ್ಯಗಳು ಜೀವನದ ಅನುಭವವಾಗಿದೆ. ಈ ಅನುಭವಗಳ ಸಾರರೂಪವೇ ಗಾದೆ.

ಘಟನಾ ರೂಪದ ಗಾದೆಗಳು ಹೀಗಿವೆ :

ಘಟನೆ ೧

ಗಾದೆ :ಹಂಪೆಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದು ಲೇಸು

ಹಂಪೆ ವಿಜಯನಗರ ಅರಸರು ಆಳಿದ ಸ್ಥಳ. ಈಗ ಅದು ಇತಿಹಾಸ ಪ್ರಸಿದ್ಧ. ದಿನಕ್ಕೆ ಸಾವಿರಾರು ಜನ ಪ್ರವಾಸಿಗರು ಬರುತ್ತಾರೆ. ವಿಜಯನಗರ ಅರಸರು ಆಳಿದ ಕೋಟೆ, ಅರಮನೆಯನ್ನು ನೋಡುತ್ತಾರೆ. ಹೊಗಳುತ್ತಾರೆ.

ಹಂಪೆ ಪ್ರಪಂಚದಲ್ಲೇ ಪ್ರಸಿದ್ಧ. ಹಂಪೆ ನೋಡಲು ಒಮ್ಮೆ ಅಕ್ಕ ತಂಗಿಯರಿಬ್ಬರೂ ದೂರದ ಊರಿಂದ ಬಂದರು. ಹಂಪೆಯಲ್ಲಾ ಸುತ್ತಾಡಿ ಸುಸ್ತಾದರು. ಕೊನೆಗೆ ಒಂದು ಕಡೆ ಕುಳಿತು, "ಈ ಹಾಳು ಹಂಪೆಗೆ ಬರುವುದಕ್ಕಿಂತ ನಮ್ಮ ಕೊಂಪೆಯೇ ಚೆನ್ನಾಗಿದೆ " ಎಂದರು. ಅವರು ಅಲ್ಲೇ ಕಲ್ಲಾದರು.

ಈಗಲೂ ಅಕ್ಕ ತಂಗಿಯರ ಬಂಡೆಯನ್ನು ನೋಡುವ ಪ್ರವಾಸಿಗರು ಆ ಘಟನೆಯನ್ನು ನೆನಪಿಸುತ್ತಾರೆ.

ಘಟನೆ: ೩

ಗಾದೆ : ಕುಂಬಳಕಾಯಿ ಕಳ್ಳ ಭುಜ ಮುಟ್ಟಿ ನೋಡಿದ ಹಾಗೆ

ಕಳ್ಳ ಎಂದೂ ಸಿಕ್ಕಿ ಬೀಳುವುದಿಲ್ಲ. ಕಳ್ಳ ಸುಳ್ಳು ಹೇಳುತ್ತಾನೆ. ಕಳ್ಳನಿಗೆ ಉಪಾಯ ಗೊತ್ತಿರುತ್ತದೆ. ಅಪಾಯವನ್ನು ಉಪಾಯದಿಂದ ಜಯಿಸುತ್ತಾನೆ. ಕಳ್ಳನ ಮನಸ್ಸು ತುಂಬಾ ಗಟ್ಟಿ. ಯಾವ ಕಷ್ಟಕ್ಕೂ ಕಳ್ಳ ತಯಾರಿರುತ್ತಾನೆ. ಕಳ್ಳನನ್ನು ಹಿಡಿಯುವವನು ಕಳ್ಳನೇ ಆಗಿರುತ್ತಾನೆ. ಕಳ್ಳನ ಉಪಾಯವನ್ನು ಆತ ತಿಳಿದಿರುತ್ತಾನೆ.

ಒಬ್ಬ ಕಳ್ಳ ಸಿಕ್ಕಿ ಬಿದ್ದ ಘಟನೆ ಇಲ್ಲಿದೆ.

ಒಬ್ಬ ಕಳ್ಳ ಒಂದು ಕುಂಬಳಕಾಯಿ ಕದ್ದ. ಅದು ಆ ಊರಿನ ಒಬ್ಬ ಬಡವನದು. ಆತ ರಾಜನಿಗೆ ದೂರುಕೊಟ್ಟ. ರಾಜದೂತರು ಊರೆಲ್ಲಾ ಹೋದರು. ಕಳ್ಳನಿಗಾಗಿ ಹುಡುಕಿದರು. ಸಂಶಯ ಬಂದವರನ್ನು ಎಳೆದು ತಂದರು.

ರಾಜನ ದರಬಾರು ಆಯಿತು. ಎಲ್ಲರನ್ನೂ ರಾಜನ ಎದುರು ಸಾಲಾಗಿ ನಿಲ್ಲಿಸಿದರು. ಅವರಲ್ಲಿ ಕುಂಬಳಕಾಯಿ ಕಳ್ಳನೂ ಇದ್ದ. ರಾಜ ಬಹಳ ಜಾಣ. ಒಬ್ಬೊಬ್ಬರನ್ನೇ ದಿಟ್ಟಿಸಿದ. ರಾಜ ಹೇಳಿದ ,

" ಕದ್ದವನು ಕುಂಬಳವನ್ನು ಹೆಗಲ ಮೇಲೆ ಹೊತ್ತಿರಬೇಕು. ಈಗಲೂ ಅದರ ಗುರುತು ಇರಬಹುದು. ಎಲ್ಲರ ಹೆಗಲನ್ನೂ ಪರೀಕ್ಷಿಸಿರಿ " ಎಂದು ದೂತರಿಗೆ ಸೂಚಿಸಿದ.

ಅಷ್ಟರಲ್ಲಿ ಕುಂಬಳಕಾಯಿ ಕಳ್ಳ ಹೆಗಲು ಕೊಡವಿದ. ರಾಜ ಆತನನ್ನು ಕಂಡು ಹಿಡಿದ. ಕುಂಬಳಕಾಯಿ ಕಳ್ಳ ಸಿಕ್ಕಿಬಿದ್ದ.

ಕಳ್ಳನ ಕುರಿತು ಹಲವು ಗಾದೆಗಳಿವೆ.

೧. ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ

೨. ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ

೩. ಕಳ್ಳನನ್ನಾದರೂ ನಂಬಬಹುದು
ಸುಳ್ಳನನ್ನು ನಂಬಬಾರದು

೪. ಅಡಿಕೆ ಕದ್ದರೂ ಕಳ್ಳ
ಆನೆ ಕದ್ದರೂ ಕಳ್ಳ

೫. ಕಳ್ಳನಿಗೆ ಅಳ್ಳೆಯಲ್ಲಿ ಶಂಕೆ

೬. ಕಳ್ಳನಿಗೊಂದು ಪಿಳ್ಳೆನೆವ

೭. ಕಳ್ಳನಿಗೆ ಚೇಳು ಬಡಿದ ಹಾಗೆ

೮. ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ

೯. ಕಳ್ಳನ ಕೆಲಸ ಚೆನ್ನ
ಸುಳ್ಳನ ಮಾತು ಚೆನ್ನ

ಘಟನೆ : ೩

ಗಾದೆ: ನೀರಾಗಿದ್ದ ಅಗಸ ಬಾಯಾರ್ರಿ ಸತ್ತಂಗೆ

ಒಬ್ಬ ಅಗಸ ಹಠದಿಂದ ಸತ್ತ. ಆತ ನೀರಲ್ಲೇ ಇದ್ದು ಬಾಯಾರಿ ಸತ್ತ. ಆ ಕಥೆ ಹೀಗಿದೆ,

ಒಂದು ಊರು ಇತ್ತು. ಆ ಊರಲ್ಲಿ ಒಬ್ಬ ಅಗಸನಿದ್ದ. ಹಬ್ಬ -ಹುಣ್ಣಿಮೆಗ
ಮನೆಮನೆಗೂ ಹೋಗುತ್ತಿದ್ದ. ಮನೆಗೊಂದು ಗಂಟು ಬಟ್ಟೆ ಒಗೆಯುತ್ತಿದ್ದ. ಒಮ್ಮೆ ಹೋಳ
ಹಬ್ಬ ಬಂತು. ವಾಡಿಕೆಯಂತೆ ಎಲ್ಲಾ ಮನೆಗೂ ಹೋದ. ಕೆರೆ ದಂಡೆಯ ಮೇಲೆ ಬಟ್ಟೆಯ
ದೊಡ್ಡ ರಾಶಿ ಆಯಿತು. ಅಗಸ ರಾಶಿ ನೋಡಿ ಹೆದರಿದ. ಅರ್ಧ ರಾಶಿ ಬಟ್ಟೆ ಒಗೆದಾಗ
ಅಗಸನಿಗೆ ಬಾಯಾರಿತು. ಆದರೆ ಎಲ್ಲಾ ಒಗೆಯಬೇಕು. ನಂತರ ಬೀಡಿ ಸೇದಬೇಕು. ನಂತರ
ನೀರು ಕುಡಿಯಬೇಕೆಂದು ಹಟ ಹಿಡಿದ. ಕೆಲಸ ಹೆಚ್ಚಾದಂತೆ ಬಾಯಾರಿಕೆಯೂ ಹೆಚ್ಚಾಯಿತು.
ಬಾಯಿ - ಗಂಟಲು ಒಣಗಿತು. ತಲೆತಿರುಗಿ ಕೆರೆಗೆ ಬಿದ್ದ. ನೀರು ಕುಡಿದು ಸತ್ತೇ ಹೋದ.

ಘಟನೆ : ೪

ಗಾದೆ : ಮಡಿವಾಳನನ್ನು ಮೊಸಳೆ ಹಿಡಿದ ಹಾಗೆ

ಇದು ಮಡಿವಾಳನನ್ನು ಮೊಸಳೆ ಹಿಡಿದ ಕತೆ. ಈ ಗಾದೆ ಹೋಲಿಕೆಯ ರೂಪದಲ್ಲಿದೆ. ಪ್ರತಿಯೊಬ್ಬನಲ್ಲೂ ನಂಬಿಕೆ, ವಿಶ್ವಾಸ ಬೇಕು. ಅದಿಲ್ಲದಿದ್ದರೆ "ಮಡಿವಾಳನ ಹೆಣವನ್ನು ಹೊರಗೆ ಇಟ್ಟ ಮೇಲೆ ಗೊತ್ತು " ಅಂದ ಹಾಗೆ ಆಗಬಹುದು. ಮಡಿವಾಳ ಸಮಾಜದಲ್ಲಿ ತಮಾಷೆಯ ವ್ಯಕ್ತಿ. ತಮಾಷೆ ಆತನ ಸಾವಿಗೆ ಕಾರಣವಾಗುತ್ತದೆ.

ಒಂದು ಊರಲ್ಲಿ ಒಬ್ಬ ಮಡಿವಾಳನಿದ್ದ. ಒಂದು ದಿನ ಆತ ಬಟ್ಟೆ ಒಗೆಯುತ್ತಿದ್ದ. ಆತ ತಮಾಷೆಗಾಗಿ'ಮೊಸಳೆ ಬಂತು ' ಎಂದು ಕೂಗಿದ. ಹತ್ತಿರದ ಮನೆಯವರು ಆಯುಧ ಹಿಡಿದು ಓಡಿ ಬಂದರು. ಬಂದಾಗ ಅಲ್ಲಿ ಏನೂ ಇರಲಿಲ್ಲ. ಮಡಿವಾಳ ಅವರನ್ನು ತಮಾಷೆ ಮಾಡಿದ್ದ. ಅವರೆಲ್ಲರೂ ಮಡಿವಾಳನನ್ನು ಶಪಿಸುತ್ತಾ ಹೋದರು. ಹೀಗೆ ಎರಡು -ಮೂರು ಬಾರಿ ಮಡಿವಾಳನ ತಮಾಷೆ ನಡೆಯಿತು. ಕೊನೆಗೂ ಮೊಸಳೆ ಮಡಿವಾಳನ ಕಾಲನ್ನು ಹಿಡಿಯಿತು. ಮಡಿವಾಳ ಕೂಗಿಕೊಂಡ. ಮೊಸಳೆ ಬಂತೋ ಮೊಸಳೆ ಬಂತೆಂದು ಬಾಯಿ ಬಡಿದ. ಯಾರೂ ಆತನ ಸಹಾಯಕ್ಕೆ ಬರಲಿಲ್ಲ. ಅಗಸನನ್ನು ಮೊಸಳೆ ತಿಂದಿತು.

ಘಟನೆ : ೫

ಸಾಮಾನ್ಯವಾಗಿ ಕುಟುಂಬದಲ್ಲಿ ಅತ್ತೆಯದ್ದೆ ಪ್ರಧಾನಪಾತ್ರ. ಅತ್ತೆಯ ಕಿರುಕುಳವನ್ನು ಸೊಸೆ ಅನುಭವಿಸಬೇಕು. ಅತ್ತೆಗೆ ಸೊಸೆಯ ಮೇಲೆ ಕೋಪವಿದ್ದಷ್ಟೇ ಮಗಳ ಮೇಲೆ ಪ್ರೀತಿ ಇರುತ್ತದೆ. ಅತ್ತೆಯ ಕೋಪಕ್ಕೆ ಸಾಟಿಯಾಗಿಯೇ ಸೊಸೆಯೂ ವರ್ತಿಸುತ್ತಾಳೆ. ಮಾತಿನಲ್ಲಿ, ಕೆಲಸದಲ್ಲಿ, ಅತ್ತೆಗಿಂತ ಸೊಸೆಯೇ ಮೇಲು. ಮನೆಯ ಅಧಿಕಾರದಲ್ಲಿ ಸೊಸೆ ಸಮಭಾಗಿ. ' ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ' ಎಂಬ ಮಾತಿದೆ. ಸೊಸೆ ಪಾಪವಿದ್ದರೆ ಅತ್ತೆ ಜೋರು. ಅತ್ತೆ ಪಾಪವಿದ್ದರೆ ಸೊಸೆ ಜೋರು. ಹೀಗೆ ಸಮಾನ ಗುಣ ಅವರಲ್ಲಿದೆ. ಅತ್ತೆ -ಸೊಸೆಯರ ಬಗೆಗೆ ಹಲವು ಗಾದೆಗಳಿವೆ. ಘಟನೆಗಳೂ ಸಿಗುತ್ತವೆ.

೧. ಅತ್ತೆ ಅಟ್ಟಕ್ಕೆ ಹತ್ತಿದರೆ ಸೊಸೆ ಮಾಡಿಗೆ ಹತ್ತಿದಳು

೨. ಅತ್ತೆ ಅರಿಯೋ ಕಲ್ಲು ಸೊಸೆ ಬೀಸೋಕಲ್ಲು

೩. ಅತ್ತೆ ಉಂಡ ಬಟ್ಟಲು ಅಟ್ಟದ ಮೇಲೆ

೪. ಅತ್ತೆ ದೂರು ಒಲೆ ಮುಂದೆ
ಸೊಸೆ ದೂರು ಊರು ಮುಂದೆ

೫. ಅತ್ತೆ ಅಡ್ಡ ಮಳೆ
ಸೊಸೆ ಸೋನೆ ಮಳೆ

೬. ಅತ್ತೆ ಮನೆಯಲ್ಲಿ ಅರಸಾಗಿರುವುದಕ್ಕಿಂತ
ಅಪ್ಪನ ಮನೆಯಲ್ಲಿ ಆಳಾಗಿರುವುದು ಲೇಸು.

೭. ಅತ್ತೆ ಆಡು ಮುರಿದಳು

ಸೊಸೆ ಮಾಡು ಮುರಿದಳು

೮. ಅತ್ತೆಗೆ ಆರು ಬೀದಿ

ಸೊಸೆಗೆ ಮೂರು ಬೀದಿ

೯. ಅತ್ತೆ ಇರುವ ತನಕ ಮಾತು

ಸೊಸೆ ಇರುವತನಕ ಜಳ್ಳು

೧೦. ಅತ್ತೆ ಒಡೆದ ಮಡಕೆ ಅಡಕಲಾಗೆ

ಸೊಸೆ ಒಡೆದ ಮಡಕೆ ಅಂಗಳದಾಗೆ

೧೧. ಅತ್ತೆ ಮಾರಿ ಸೊಸೆ ಅಂದರೆ

ಎತ್ತಲಾದರೂ ಒಬ್ಬಳೇ

೧೨. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ

೧೩. ಅತ್ತೆ ಸತ್ತು ಆರುತಿಂಗಳ ಮೇಲೆ

ಸೊಸೆ ಕಣ್ಣಲ್ಲಿ ನೀರು ಬಂತು

೧೪. ಅತ್ತೆ ಮನೆಗೆ ಮಜ್ಜಿಗೆ ನೀರು

ತೌರು ಮನೆಗೆ ಮಜ್ಜಿಗೆ ಮೊಸರು

೧೫. ಅತ್ತೆಗೆ ಆಸೆಕಲ್ಲು

ಸೊಸೆಗೆ ಗುಂಡುಕಲ್ಲು

೧೬. ಅತ್ತೆಗೆ ಅಗಸಗೇರಿ

ಸೊಸೆಗೆ ಬಸವಗೇರಿ

೧೭. ಅತ್ತೆ ಒಡೆದ ಮಡಕೆಗೆ ಬೆಲೆ ಇಲ್ಲ

ಗಾದೆ: ಅತ್ತೆಗೆ ಸೊಸೆ ಎರಡನೆ ಬಾರಿ ಬಡಿಸಲು ಬಂದ ಹಾಗೆ

ಸೊಸೆ ಅತ್ತೆಗಿಂತ ಜಾಣಳು, ಈ ಗಾದೆ ಅತ್ತೆಯ ಕಳ್ಳತನವನ್ನು ಸೊಸೆ ಪತ್ತೆ ಹಚ್ಚುವುದಾಗಿದೆ. ಮಿತವಾಗಿ ಅಕ್ಕಿ ಬಳಸುವ ಮನೆಯಲ್ಲಿ ಆದಂತಹ ಒಂದು ಘಟನೆಯಿದು.



ಇನ್ನೊಂದಿಷ್ಟು ಬಡಿಸಲೇ ಅತ್ತೇ?

ಅತ್ತೆ ಸೊಸೆ ಇಬ್ಬರೂ ಕದ್ದು ತಿನ್ನಲು ಹೊಂಚು ಹಾಕುವರು. ಅತ್ತೆ ಇಲ್ಲದ ಸಮಯದಲ್ಲಿ ಸೊಸೆ ಅಡಿಗೆ ಮನೆಗೆ ಬರುವಳು. ತಟ್ಟೆಯಲ್ಲಿ ಅನ್ನಹಾಕಿ ಕತ್ತಲೆ ಇದ್ದ ಮೂಲೆಗೆ ಹೋಗುವಳು. ಸೊಸೆಗಿಂತ ಮೊದಲೇ ಅತ್ತೆ ಆ ಮೂಲೆಯಲ್ಲಿ ಕುಳಿತು ಕದ್ದು ತಿನ್ನುತ್ತಿದ್ದಳು. ಅತ್ತೆಯನ್ನು ಕಂಡ ಸೊಸೆ - ' ಅನ್ನ ತಂದಿದ್ದೇನೆ ಅತ್ತೆ. ಎರಡನೇ ಬಾರಿ ಬಡಿಸುತ್ತೇನೆ. ' ಎಂದು ಹೇಳುವಳು.

ಗಾದೆ : ಅತ್ತೆಯ ಮಾತು ಕೇಳುವಾಗ ಉಡಿಯಲ್ಲಿ ಹಬೆ ಏಳುತ್ತದೆ

ಕಳ್ಳ ಕದ್ದ ವಸ್ತುವನ್ನು ಮುಚ್ಚಿಡಲು ಕಷ್ಟ ಪಡುತ್ತಾನೆ. ಕಳ್ಳತನವನ್ನು ಮರೆಮಾಚಲು ಸಭ್ಯನಂತೆ ವರ್ತಿಸುತ್ತಾನೆ. ಸುಳ್ಳು ಹೇಳುತ್ತಾನೆ. ತಪ್ಪು ತನ್ನದಾದರೂ ಜಗಳ ಕಾಯುತ್ತಾನೆ. ಅತ್ತೆ ಸೊಸೆಯರ ನಡುವೆ ಈ ರೀತಿಯ ಹಲವು ಘಟನೆಗಳಿವೆ.

ಅತ್ತೆ ಸೊಸೆ ಇದ್ದರು. ಅತ್ತೆ ತೋಟದ ಕಡೆಗೆ ಹೋದಳು. ಸೊಸೆ ಅತ್ತೆ ಹೋಗುವುದನ್ನೇ ಕಾದಿದ್ದಳು. ಸೊಸೆ ಅಡುಗೆ ಮನೆಗೆ ಹೋದಳು. ಆದಿನ ಕಡುಬು ಮಾಡಿದ್ದರು. ಸೊಸೆ ಕಡುಬು ಕದ್ದು ತಿನ್ನಲು ಯೋಚಿಸಿದಳು. ಬಿಸಿಬಿಸಿ ಕಡುಬನ್ನು ಒಲೆಯಿಂದ ತೆಗೆದಳು. ಆ ಹೊತ್ತಿಗೆ ಅತ್ತೆ ತೋಟದಿಂದ ಬಂದಳು. ಅತ್ತೆ ಬಂದಳೆಂದು ಸೊಸೆ ಕಡುಬನ್ನು ಉಡಿಯಲ್ಲಿ ಕಟ್ಟಿಕೊಂಡಳು. ಉಡಿಯಲ್ಲಿದ್ದ ಕಡುಬು ಸುಡುತ್ತಿತ್ತು. ಸೊಸೆ ತನ್ನ ಜಾಣತನದಿಂದ " ಅತ್ತೆಯ ಮಾತು ಕೇಳುವಾಗ ಉಡಿಯಲ್ಲಿ ಹಬೆ ಏಳುತ್ತದೆ" ಅಂದಳು.

ಘಟನೆ : ೬

ಗಾದೆ : ಎಂಕು ಪಣಂಬೂರಿಗೆ ಹೋದ ಹಾಗೆ

'ಪಣಂಬೂರು' ಎಂದರೆ ಮಂಗಳೂರಿನ ಹಡಗು ನಿಲ್ದಾಣ.

ಹೋದ ಕೆಲಸವನ್ನು ಮಾಡದೆ, ಹೇಳಿದ ಕೆಲಸವನ್ನು ಸರಿಯಾಗಿ ಗ್ರಹಿಸದೆ ಇದ್ದಾಗ ಈ ಗಾದೆ ಹೇಳುತ್ತಾರೆ. ಇದೊಂದು ಪೆದ್ದನ ಕಥೆ.

ಒಂದು ಊರಲ್ಲಿ ಗಂಡ ಹೆಂಡತಿ ಇದ್ದರು. ಅವರಿಗೊಬ್ಬ ಕೆಲಸದಾತ. ಅವನ ಹೆಸರು ಎಂಕು. ಒಂದು ದಿನ ರಾತ್ರಿ ಗಂಡ ಹೆಂಡತಿ ಮಾತನಾಡುತ್ತಿದ್ದರು. ಎಂಕು ಅದನ್ನು ಕದ್ದು ಕೇಳಿಸಿಕೊಂಡ. "ನಾಳೆ ಎಂಕುನನ್ನು ಪಣಂಬೂರಿಗೆ ಕಳುಹಿಸಬೇಕು " ಮರುದಿನ

ಮುಂಜಾನೆಯೇ ಎಂಕು ಪಣಂಬೂರಿಗೆ ಹೋದ. ಎಂಕು ಪಣಂಬೂರಿಗೆ ಹೋಗಿರುವುದು ಯಾರಿಗೂ ಗೊತ್ತಿಲ್ಲ. ಗಂಡ ಹೆಂಡತಿ ಎಂಕುನನ್ನು ಹುಡುಕಾಡಿದರು. ಸಾಯಂಕಾಲ ಎಂಕು ಪಣಂಬೂರಿನಿಂದ ಬಂದ. ಬಂದ ಕೂಡಲೇ ಎಂಕುನನ್ನು ಕೇಳಿದರು.

ಎಂಕು ಎಲ್ಲಿಗೆ ಹೋಗಿದ್ದೆ ? ಪಣಂಬೂರಿಗೆ. ಯಾಕೆ ?

ರಾತ್ರಿ ನೀವು ಮಾತನಾಡುತ್ತಿದ್ದಿರಿ. ಕೇಳಿಸಿಕೊಂಡೆ. ಹಾಗಾಗಿ ಹೋದೆ. ಹೋಗಿ ಬಂದೆ.

ಯಾಕೆ ? ಏನು ? ಎಂದು ನೀವು ಮಾತನಾಡಲಿಲ್ಲ. ಹೀಗೆ ಎಂಕು ಪಣಂಬೂರಿಗೆ ಹೋದ ಗಾದೆ ಬಳಕೆಗೆ ಬಂದಿತು.

ಘಟನೆ :೨

ಗಾದೆ : ಜಿರಳೆ ಬೊಂಬಾಯಿಗೆ ಹೋದಂತೆ

ಜಿರಳೆಯಂತಹ ಜೀವಿಗೆ ಬೊಂಬಾಯಿಗೆ ಹೋಗುವುದು ಎಂದರೆ ಹಾಸ್ಯವಾಗುತ್ತದೆ. 'ಜಿರಳೆ ಮೀಸೆ ಹೊಕ್ಕರೆ ಸಾಕು 'ನುಗ್ಗುತ್ತದೆ. ಜಿರಳೆ ಪರಾವಲಂಬಿ ಜೀವಿ. ಅದಕ್ಕೆ ಬೊಂಬಾಯಿಗೆ ಹೋಗುವುದು ಕಷ್ಟವಲ್ಲ. ಜಿರಳೆಯಿಂದ ಮನುಷ್ಯನಿಗೆ ಸಹಾಯವಿಲ್ಲ.

ಜಿರಳೆ ಬಿದ್ದ ಎಣ್ಣೆ ಹಾಳು
ಜಿರಳೆ ತಿಂದ ವಸ್ತು ಹಾಳು

ಜಿರಳೆಯೊಂದು ಬೊಂಬಾಯಿಗೆ ಹೋಗುತ್ತದೆ. ಬೊಂಬಾಯಿಗೆ ಹೋಗುವ ವಸ್ತುವಿನ ಮಧ್ಯೆ ಜಿರಳೆ ವಾಸವಿರುತ್ತದೆ. ಬೊಂಬಾಯಿಗೆ ಹೋದ ಪೆಟ್ಟಿಗೆ ವಾಪಸ್ಸು

ಬರುವಾಗ ಅಲ್ಲೇ ವಾಸವಿರುತ್ತದೆ. ಜಿರಳೆ ಹೋದದ್ದು ಎಲ್ಲಿಗೆ ? ಯಾಕೆ ?ಹೇಗೆ ? ಎಂಬುದು ಯಾರಿಗೂ ಗೊತ್ತಿಲ್ಲ.

ಘಟನೆ : ೮

ಗಾದೆ : ಸೆಟ್ಟಿ ಹೆಡ್ಡ ಕುಂಬಾರ ಜಾಣ

ದುಡ್ಡು ಸಣ್ಣದು ಕಾಯಿ ದೊಡ್ಡದು

ನಾನೇ ಜಾಣ.

ದುಡ್ಡಿನ ಬೆಲೆ ಗೊತ್ತಿರದ ಕುಂಬಾರನ ಕಥೆ. ಕುಂಬಾರ ದುಡಿದು ತಿನ್ನುವವ. ಆತನಿಗೆ ಅಕ್ಷರ ಅಭ್ಯಾಸವಿಲ್ಲ. ದುಡ್ಡು ಗಾತ್ರದಲ್ಲಿ ಸಣ್ಣದು, ವಸ್ತು ದೊಡ್ಡದು. ಹಾಗಾಗಿ ಮಡಕೆ ಕೊಟ್ಟು ದುಡ್ಡು ಬೇಡ ಬದಲಿ ವಸ್ತು ಕೊಡು ಎಂದ. ಆ ಘಟನೆ ಹೀಗಿದೆ.

ಒಬ್ಬ ಕುಂಬಾರನಿದ್ದ. ಆತ ಮಡಕೆ ಮಾರಿ ಜೀವಿಸುತ್ತಿದ್ದ. ಒಮ್ಮೆ ಪಟ್ಟಣಕ್ಕೆ ಮಡಕೆ ಮಾರಲು ಹೋದ. ಒಬ್ಬ ಸೆಟ್ಟಿಗೆ ಮಡಕೆ ಮಾರಾಟಮಾಡಿದ. ಸೆಟ್ಟಿ ದುಡ್ಡುಕೊಟ್ಟ. ತನಗೆ ದುಡ್ಡು ಬೇಡ, ಬೇರೆ ವಸ್ತು ಕೊಡು ಎಂದು ಕೇಳಿಕೊಂಡ. ಸೆಟ್ಟಿ ಮಡಕೆ ಬೆಲೆಯಷ್ಟು ದೊಡ್ಡ ತೆಂಗಿನಕಾಯಿ ಕೊಟ್ಟ. ಕುಂಬಾರನಿಗೆ ಸಂತೋಷವಾಯಿತು. ಕುಂಬಾರ ಹೆಡ್ಡನಾದರೂ ಆತನ ಮನಸ್ಸಿನಲ್ಲಿ ಸೆಟ್ಟಿ ಹೆಡ್ಡ ನಾ ಜಾಣ ' ಎಂದು ಹೆಮ್ಮೆ ಪಟ್ಟ

ಘಟನೆ : ೯

ಗಾದೆ: ಗಾಣಿಗ ಗಾಣಿಗಿತ್ತಿಯರ ಜಗಳದಂತೆ

ಕಳ್ಳ ಹೇಗಾದರೂ ಕದಿಯುತ್ತಾನೆ. ಅಕ್ಕನ ಚಿನ್ನವನ್ನಾದರೂ ಅಕ್ಕಸಾಲಿಗ ತೊನೆಯದೆ ಬಿಡ ಎಂಬ ಗಾದೆಯಿದೆ. ತಾಯಿಯ ಮೂಗುತಿಯಿಂದಲಾದರೂ ಅಕ್ಕ ಸಾಲಿಗನು

ಕದಿಯಬೇಕು. ಕದಿಯುವಾತ ಸುಳ್ಳು ಕಾರಣ ನಿರ್ಮಿಸುತ್ತಾನೆ. ಸತ್ಯವಂತನಂತೆ ವರ್ತಿಸುತ್ತಾನೆ. ಗಾಣಿಗನೊಬ್ಬ ಎಣ್ಣೆ ಕದಿಯಲು ಹೆಂಡತಿಯೊಡನೆ ಜಗಳವಾಡುತ್ತಾನೆ. ಆ ಘಟನೆ ಹೀಗಿದೆ

ಗಾಣಿಗ ಎಣ್ಣೆ ತೆಗೆಯುತ್ತಿದ್ದ. ಗಾಣಗಿತ್ತಿಯು ಗಾಣವನ್ನು ದೂಡುತ್ತಿದ್ದಳು. ಎಣ್ಣೆಯ ಯಜಮಾನ ಅಲ್ಲೇ ಕಾಯುತ್ತಿದ್ದ. ಗಾಣಿಗನಿಗೆ ಎಣ್ಣೆ ಕದಿಯಲು ಆಗಲಿಲ್ಲ. ಗಾಣಿಗ ಒಂದು ಉಪಾಯ ಹುಡುಕಿದ. ಗಾಣದೊಳಗಿನ ಎಣ್ಣೆಯನ್ನು ಬಟ್ಟೆ ತುಂಡಲ್ಲಿ ಅದ್ದಿದ. ಗಾಣಗಿತ್ತಿಯ ಜೊತೆ ಜಗಳವಾಡಿದ. ಆಕೆ ಮನೆಯೊಳಗೆ ಓಡಿದಳು. ಆಕೆಯನ್ನು ಬೆನ್ನಟ್ಟುತ್ತಾ ಹೋದ. ಎಣ್ಣೆ ಬಟ್ಟೆಯನ್ನು ಬಾಣಲೆಗೆ ಹಿಂಡಿದ. ಯಜಮಾನನಿಗೆ ತಿಳಿಯದಂತೆ ಎಣ್ಣೆಕದ್ದು ಪಾರಾದ.

ಘಟನೆ : ೧೦

ಗಾದೆ : ಅಜ್ಜಿ ಸತ್ತದ್ದೂ

ಮುಸು ಸಿಕ್ಕಿದ್ದೂ ಸಮಾಸಮ

'ಮುಸು ' ಎಂಬುದೊಂದು ಪ್ರಾಣಿ. ಅದು ಮಂಗನ ಜಾತಿಗೆ ಸೇರುತ್ತದೆ. ಮಂಗಕ್ಕಿಂತ ದೊಡ್ಡದು. ಕಪ್ಪು ಮುಖವುಳ್ಳದ್ದು. ದಕ್ಷಿಣ ಕನ್ನಡದಲ್ಲಿ ಮುಸುವನ್ನು ಕೆಲವು ಜನಾಂಗದವರು ತಿನ್ನುತ್ತಾರೆ.

ಸಾಯುವವರಿಗೆ ಬಯಕೆ ಹೆಚ್ಚು. ಮುದುಕಿಗೆ ಮುಸುತಿನ್ನುವ ಆಸೆಯಾಗುತ್ತದೆ. ಮುಸುವಿನ ಮಾಂಸವೇ ಸಿಗುವುದಿಲ್ಲ. ಒಮ್ಮೆ ಬೇಟೆ ಆಯಿತು. ಬೇಟೆಯಲ್ಲಿ ಒಂದು ಮುಸುವನ್ನು ಹೊಡೆದರು. ಆ ದಿನ ಅಜ್ಜಿ ಸತ್ತಿದ್ದಳು. ಅಜ್ಜಿಯ ಬಯಕೆ ಈಡೇರಲಿಲ್ಲ. ಮುಸು ಸಿಕ್ಕಿದ್ದು _ಮುದುಕಿ ಸತ್ತದ್ದು ಸಮಾಸಮ ಗಾದೆ ಬಳಕೆಗೆ ಬಂತು.

ಘಟನೆ : ೧೧

ಗಾದೆ : ಸಾವಿರ ರೂಪಾಯಿ ಖರ್ಚುಮಾಡಿ
ಮೂಸೆಯೆಂದು ಕರೆಸಿದ ಹಾಗೆ

ಬಡವನಿಗೆ ಸಿರಿತನ ಬಂದರೆ ಮಧ್ಯರಾತ್ರಿಯಲ್ಲೆದ್ದು ಕೊಡೆ ಹಿಡಿಯುವನಂತೆ. ಸಿರಿತನ ಮನುಷ್ಯನ ವರ್ತನೆಯನ್ನು ಬದಲಾಯಿಸುತ್ತದೆ. ವ್ಯವಹಾರ ಬದಲಾಗುತ್ತದೆ. ಕೆಲಸಕ್ಕೆ ಗುರಿ ಇಲ್ಲವಾದರೆ ಪ್ರತಿಫಲವಿಲ್ಲ. ಮೂಸೆ ಎಂಬಾತನಿಗೆ ಆದದ್ದೂ ಇದೇ. ಆ ಕಥೆ ಹೀಗಿದೆ :

ಒಂದೂರಲ್ಲಿ ಬಡ ಮುಸಲ್ಮಾನನಿದ್ದ. ಅವನ ಹೆಸರು ಮೂಸೆ. ಅವನು ಮನೆ ಮನೆಗೆ ಒಣಗಿದ ಮೀನು ಮಾರುತ್ತಿದ್ದ. ಅದೇ ವ್ಯಾಪಾರದಲ್ಲಿ ಸಿರಿತನ ಬಂತು. ಮೂಸೆಗೆ ತನ್ನ ಹೆಸರು ಬದಲಾಯಿಸಬೇಕೆಂಬ ಹುಚ್ಚಾಯಿತು. ಅದಕ್ಕಾಗಿ ಒಂದು ಊಟದ ಕೂಟ ಏರ್ಪಡಿಸಿದ. ಊರವರೆಲ್ಲರನ್ನೂ ಕರೆಸಿದ. ಎಲ್ಲರೂ ಬಂದರು. ಉಂಡು ತೇಗಿದರು. ಹೊರಟಾಗ 'ಹೋಗುವೆವು ಮೂಸೆ ' ಎಂದರು. ಸಾವಿರಾರು ರೂಪಾಯಿ ಖರ್ಚುಮಾಡಿ ಮೂಸೆ ಹೆಸರು ಹಾಗೇ ಉಳಿಯಿತು.

ಘಟನೆ : ೧೨

ಗಾದೆ: ಮನೆಯಲ್ಲಿದ್ದರೆ ಲಿಂಗಾಕಾರ
ಹಾದಿಹಿಡಿದರೆ ಚಕ್ರಾಕಾರ
ಇಲ್ಲಿಗೂ ಬಂದೆಯಾ ಜಡೆ ಶಂಕರ

ದರಿದ್ರನೊಬ್ಬನಿಗೆ ಮನೆಯಲ್ಲಿ ನಿತ್ಯವೂ ರಾಗಿ ಹಿಟ್ಟು ತಿಂದು ಬೇಸರವಾಯಿತು. ಒಮ್ಮೆ ಅತ್ತೆ ಮನೆಗೆ ಹೋದ. ಒಳ್ಳೆಯ ಬುತ್ತಿಕೊಡುವಂತೆ ಹೆಂಡತಿಗೆ ಕೇಳಿದ. ಆಕೆ

ದಾರಿಯ ಬುತ್ತಿಗೆಂದು ರಾಗಿರೊಟ್ಟಿ ಕಟ್ಟಿಕೊಟ್ಟಳು. ಆತ ಅತ್ತೆ ಮನೆಗೆ ಹೋದ. ಅಲ್ಲಿ ಅಪರೂಪದ ಅಳಿಯನಿಗೆ ಬಗೆಬಗೆಯ ಅಡುಗೆಯಾಯಿತು. 'ಈ ದಿನವಾದರೂ ರಾಗಿರೊಟ್ಟಿ ತಪ್ಪಿತು. ' ಎಂದು ಅಳಿಯ ಸಂತೋಷಗೊಂಡ.

ಉಣ್ಣುತ್ತಿರುವಾಗ ಅತ್ತೆ ಶಾವಿಗೆ ತಂದು ಬಡಿಸಿದಳು. ಅದು ರಾಗಿ ಹಿಟ್ಟಿನ ಶಾವಿಗೆ ! ಆಗ ಅಳಿಯನಿಗೆ ರೇಗಿ ಹೋಗಿ ಈ ಗಾದೆ ಹೇಳಿದನಂತೆ.

ಗಾದೆ ಗೀತೆಗಳು

ಗಾದೆಗಳಲ್ಲಿ ಗಾದೆ ಗೀತೆಗಳಿವೆ. ಗಾದೆ ಗೀತೆಗಳಲ್ಲಿ ಪ್ರಾಸ ಪದ.

೧. ಗಾದೆಯ ಮಾತು ವೇದಕ್ಕೆ ಸಮಾನ
ತೃಷೆ ಇಲ್ಲದವ ಋಷಿಗೆ ಸಮಾನ
ಮುಪ್ಪಿನ ಸಾವು ಮದುವೆಗೆ ಸಮಾನ
ಹತ್ತು ಜನರ ಮಾತು ಮುತ್ತಿನ ಸಮಾನ
ಸುಮ್ಮನಿರುವುದು ಸುವರ್ಣದ ಸಮಾನ
ಮಾತನಾಡುವುದು ಬೆಳ್ಳಿಯ ಸಮಾನ
ಹಳೆಯ ನೆಂಟ ಗೊಬ್ಬರಕ್ಕೆ ಸಮಾನ
ಕಾಸಿಲ್ಲದವ ಕಲ್ಲಿಗೆ ಸಮಾನ

ನರಡು ಮನುಷ್ಯ ಕೊರಡಿಗೆ ಸಮಾನ
ನಿತ್ಯವೂ ಹೋದರೆ ನುಚ್ಚಿಗೆ ಸಮಾನ
ಬಂಜೆಯ ಬಾಳು ಎಂಜಲಿಗೆ ಸಮಾನ
ನೆಲೆಯಿಲ್ಲದ ಮಾತು ಹೊಲೆಗೆ ಸಮಾನ.

೨. ಇದ್ದಾಗ ದಾನಕೊಡು ಇಲ್ಲದಾಗ ಬೇಡು
ಕೈಕೊಂಡ ಕೆಲಸವನು ಕಡೆತನಕ ಮಾಡು
ದೂರನ್ನು ಇದಿರಾಡು ಹೊಗಳನ್ನು ಹಿಂದಾಡು
ಮರ್ಮವನು ತಿಳಿದು ಧರ್ಮವನು ಮಾಡು
ಅಡುಗೆಯನು ಮಾಡಿ ಕಲಿ ಉಡುಗೆಯನು ನೋಡಿ ಕಲಿ
ಅರಿಯೆನೆಂಬ ಆನೆಯನು ಕೊಟ್ಟುಕಲಿ
ಬಾರದಿಹ ಮಾತನ್ನು ಭಾರತವ ನೋಡಿ ಕಲಿ
ಸ್ವಲ್ಪವನು ಕಲಿತರೂ ಬಹಳ ಚೆನ್ನಾಗಿ ಕಲಿ

—ಹೀಗೆ,

ಗಾದೆಗಳು ಅನುಭವದ ಮಾತುಗಳು.

ಗಾದೆಗಳ ಹಿಂದೆ ಕಥೆಗಳಿವೆ. ಘಟನೆಗಳಿವೆ.

ಗಾದೆ ಗೀತೆಗಳೂ ಇವೆಯೆಂದು ಓದಿದ್ದೇವೆ.

ಗಾದೆಯ ಬಗೆಗೆ ಇನ್ನೂ ವಿವರ ಕೊಡಬಹುದಿತ್ತು.

ಆದರೆ ಅದೇನೋ ಒಂದು ಗಾದೆ ಹೇಳುತ್ತಾರಲ್ಲ. ಹಾಗಾಗಬಾರದು.

* * *

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರಧಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು